# ಶ್ರೀಗುರುತತ್ತ್ವ

❑ ಟಿ. ರಾಧಾರಮಣಿ

ಪರಮಸತ್ಯದ ಜ್ಞಾನವನ್ನು ಉಂಟುಮಾಡುವ ಶಕ್ತಿಯೇ ಗುರುತತ್ತ್ವ ಎಂದು ನಿರೂಪಿಸಿ ಅದರ ವಿವಿಧ ಆಯಾಮಗಳನ್ನು ಪರಿಚಯಿಸಿರುವ ಶ್ರೀಮತಿ ಟಿ.ರಾಧಾರಮಣಿ ಅವರು ವಿಜಯಾ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್. ತಿರುಪತಿಯ ನಿವಾಸಿಗಳಾಗಿರುವ ಇವರು ಶ್ರೀರಾಮಕೃಷ್ಣ ಆಶ್ರಮದ ಹಿತೈಷಿಗಳೂ, ಭಕ್ತರೂ ಆಗಿದ್ದಾರೆ.

ಮೋಕ್ಷಕ್ಕೆರಡಕ್ಕರವೆ ಸಾಕು ಸರ್ವಜ್ಞ—ಈ ಉದ್ಗಾರ ಅನುಭಾವಿಯೊಬ್ಬರ ಆತ್ಮಾನುಭವದ ಸಾರ. ಸತ್ಯ! 'ಗುರು' ಎಂಬ ಮುದ್ದಾದ ಎರಡಕ್ಷರಗಳಲ್ಲಿ ಅಡಗಿರುವ ಅಕ್ಷರ ತತ್ತ್ವವೇ ಜೀವಿಯನ್ನು ಮೋಕ್ಷದ ನೆಲೆಗೊಯ್ಯುವ ಸಾಧನ. 'ಗುರು' ಎಂದರೇನು? ದುಃಖಾಲಯವೆಂದೆನಿಸಿರುವ ಈ ಪ್ರಪಂಚದಲ್ಲಿ ತನ್ನ ಸ್ವರೂಪ ಮರೆತು ಹುಟ್ಟಿನಿಂದ ಹಿಡಿದು ಸಾವಿನವರೆಗೆ ಅನೇಕ ದುಃಖಪರಂಪರೆಗಳನ್ನು ಅನುಭವಿಸುತ್ತಾ, ಆಸೆ ತೀರದೆ ಮತ್ತೆ ಮತ್ತೆ ಹುಟ್ಟಿಬರುತ್ತಾ, ಅಜ್ಞಾನದ ಕತ್ತಲೆಯಲ್ಲಿ ತೊಳಲುತ್ತಿರುವ ಜೀವಿಯನ್ನು ಎಚ್ಚರಿಸಿ ಅವನ ಬಾಳನ್ನು ಜ್ಞಾನದ, ಆನಂದದ ಜ್ಯೋತಿರ್ಮಯ ಕಿರಣಗಳಿಂದ ಬೆಳಗುವ ಜ್ಞಾನಭಾಸ್ಕರನೇ ಸದ್ಗುರು. ಹಾಗಾದರೆ 'ಗುರು' ಯಾರು? ಒಬ್ಬ ವ್ಯಕ್ತಿಯೆ? ಎಂದಿಗೂ ಅಲ್ಲ. 'ಗುರು' ಎಂಬುದು ಒಂದು ಶಕ್ತಿ. ಆ ಶಕ್ತಿಯ, ಆ ಗುರುತತ್ತ್ವದ ಆವಿರ್ಭಾವವನ್ನು ನಾವು ಅನೇಕ ವೇಳೆ ವ್ಯಕ್ತಿಗಳ ಮೂಲಕ ಕಾಣುತ್ತೇವೆಯಲ್ಲದೆ, ಅದನ್ನೊಂದು ಕೇವಲ ವ್ಯಕ್ತಿಯನ್ನಾಗಿ ಭಾವಿಸಿದಲ್ಲಿ ಅದೊಂದು ಮಹಾಭ್ರಮೆ. ಆದರೆ ಕೆಲವೊಮ್ಮೆ ವ್ಯಕ್ತಿಗೂ ಈ ಶಕ್ತಿಗೂ ಇರುವ ಸಂಬಂಧ ಸೂರ್ಯ ಮತ್ತು ಅವನ ಪ್ರಕಾಶದಂತೆ ಬೇರ್ಪಡಿಸಲಾಗದಂತಹ ನಿತ್ಯ ಸಂಬಂಧವಾಗಿರಬಹುದು.

ಆ ಶಕ್ತಿ ಯಾವುದು? ಈ ವಿಶ್ವವನ್ನೆಲ್ಲ ಒಂದು ನಿಯಮದಿಂದ ಕಟ್ಟಿ ಆಳುತ್ತಾ, ವಿಶ್ವಾಯತನವಾಗಿ, ಈ ವಿಶ್ವಕ್ಕೆ ಆಧಾರವಾಗಿ, ವಿಶ್ವದಲ್ಲಿ ಬೇರ್ಪಡಿಸಲಾಗದಂತೆ ತಾನೇ ತಾನಾಗಿ ಅಡಕವಾಗಿರುವ ಅಖಂಡ ತತ್ತ್ವವು, ತನ್ನಿಚ್ಛೆಯಿಂದ ತನ್ನ ಲೀಲೆಗಾಗಿ ಎರಡಾಗಿ, ಮೂರಾಗಿ, ಅನೇಕವಾಗಿ— ಜೀವ-ಜಗತ್ತಿನ ರೂಪದಲ್ಲಿ ಕಾಣುತ್ತಿದೆ. ಯಾವ ಭ್ರಮೆಯಿಂದ ಈ ಒಂದೇ ಸತ್ಯವು ಅನೇಕವಾಗಿ ಕಂಡುಬರುತ್ತಾ ಜೀವರಿಗೆ ನಾನಾ ವಿಧವಾದ ಕಷ್ಟ ಪರಂಪರೆಗಳು ಬಂದೊದಗಿದೆಯೋ ಆ ಭ್ರಮೆಯನ್ನು ದೂರಮಾಡಿ ಆ ಪರಮ ಸತ್ಯದ ನೇರವಾದ ಜ್ಞಾನವನ್ನು ಉಂಟುಮಾಡುವ ಶಕ್ತಿಯೇ 'ಗುರುತತ್ತ್ವ'. ಮರೆತಿರುವ ತನ್ನ ಸತ್ಯಸ್ವರೂಪವನ್ನು ಜೀವಿಯಲ್ಲಿ ಮೇಲೆಬ್ಬಿಸಿ ಅರಳಿಸುವ ಜ್ಞಾನಶಕ್ತಿಯೇ ಗುರು. ದೀಪದಿಂದ ದೀಪ ಬೆಳಗಿ ಎಲ್ಲೆಡೆಯಲ್ಲಿಯೂ ಬೆಳಕೊಂದೇ ಉಳಿಯುವಂತೆ ಜ್ಞಾನದಿಂದಲೇ ಜ್ಞಾನದ ಪ್ರಕಾಶ ಸಾಧ್ಯ. ಜ್ಞಾನ ಸಾಧನವೂ ಹೌದು, ಸಾಧ್ಯವೂ ಹೌದು; ಜ್ಞಾನದಿಂದ ಜ್ಞಾನ ಬೆಳಗಿ ಕೊನೆಗೆ ಜ್ಞಾನವೊಂದೇ ಉಳಿಯುವುದು. ಸಾಧಕನೂ ಸಾಧ್ಯವೂ ಸಾಧನವೂ ಜ್ಞಾನವೇ ಆಗುವುವು. ಗುರುಶಕ್ತಿ, ಶಿಷ್ಯ ಅಥವಾ ಮುಮುಕ್ಷುವಾದ ಜೀವ ಹಾಗೂ ಪರಮ ಸತ್ಯ ಒಂದರಲ್ಲೊಂದು ಬೆರೆತು ಒಂದೇ ನಿತ್ಯಸತ್ಯವು ತಾನೇ ತಾನಾಗಿ ಬೆಳಗುವುದು.

ಆದ್ದರಿಂದ ಯಾವುದರ ಮೂಲಕ ನಮಗೆ ಸತ್ಯಸ್ವರೂಪದ ಸಾಕ್ಷಾತ್ಕಾರವಾಗುವುದೋ ಅವೆಲ್ಲವನ್ನೂ 'ಗುರು' ಎಂದು ನಿರ್ದೇಶಿಸಬಹುದು. ಈ ದೃಷ್ಟಿಯಿಂದ ನೋಡಿದರೆ ವ್ಯಕ್ತಿಗಳು ಗ್ರಂಥಗಳು ಮಾತ್ರವಲ್ಲದೆ, ಜೀವಜಂತುಗಳೂ—ಎಷ್ಟೋ ವೇಳೆ ಹೊರಗಣ್ಣಿಗೆ ಜಡವೆಂದು ಕಾಣುವ ಕಲ್ಲು, ಮಣ್ಣು, ಮರ, ಗಿಡ ಇತ್ಯಾದಿ ವಸ್ತುಗಳೂ ಅಷ್ಟೇಕೆ ಇಡೀ ಪ್ರಕೃತಿಯೇ 'ಗುರು'ವಾಗಿ ನಮ್ಮ ಕಣ್ಣಮುಂದೆ ನಿಲ್ಲುವುವು. ಉಪನಿಷತ್ತಿನಲ್ಲಿ, ಒಂದು ನೀರುಹಕ್ಕಿಯೂ, ಒಂದು ಎತ್ತೂ, ಮತ್ತು ಒಂದು ಹಂಸ ಪಕ್ಷಿಯೂ ಗುರುವಾಗಿ ಸತ್ಯವನ್ನು ಉಪದೇಶ ಮಾಡಿದ ಆಖ್ಯಾಯಿಕೆ ಇದೆ. ಭಾಗವತದಲ್ಲಿ ಅವಧೂತ ದತ್ತಾತ್ರೇಯನು ಪ್ರಕೃತಿಯ ಮಡಿಲಲ್ಲಿ ಆತ್ಮದ ಸ್ವರೂಪವನ್ನು ಕಂಡುದಾಗಿಯೂ ತನಗೆ ೨೪ ಗುರುಗಳು ಬೋಧೆ ಮಾಡಿದ್ದಾರೆಂದೂ ಹೇಳುವನು.

> ಯಾರ ಹೃದಯಪದ್ಮ ವಿಕಸಿತವಾಗಿದೆಯೋ... ಅವರು ತೊರೆ ಅಥವಾ ಬಂಡೆಯಿಂದಲೂ ಉಪದೇಶವನ್ನು ಸ್ವೀಕರಿಸಬಹುದು.
>
> —ಸ್ವಾಮಿ ವಿವೇಕಾನಂದ

ಸಾಮಾನ್ಯವಾಗಿ ಗುರುಗಳನ್ನು ಶಿಕ್ಷಾಗುರುಗಳು ಮತ್ತು ದೀಕ್ಷಾಗುರುಗಳು ಎಂದು ಎರಡು ಬಗೆಯಲ್ಲಿ ನಿರ್ದೇಶಿಸುವರು. ತಂತ್ರ ಶಾಸ್ತ್ರಗಳಲ್ಲಿ ಗುರುತತ್ತ್ವವನ್ನು ಸೂಚಕಗುರು, ವಾಚಕ ಗುರು, ಬೋಧಕಗುರು, ನಿಷಿದ್ಧ ಗುರು, ವಿಹಿತಗುರು, ಕಾರಣ ಗುರು, ಪರಮಗುರು, ಪರಾತ್ಪರಗುರು ಎಂದು ಎಂಟು ಬಗೆಯಾಗಿ ಹೇಳಿರುವರು. ಇವರಲ್ಲಿ ಪರಾತ್ಪರಗುರು ಆ ಪರಮಸತ್ಯ ಸ್ವರೂಪನಾದ ಪರಮಾತ್ಮನೇ. 'ಪರಮಗುರು' ಆ ಪರಾತ್ಪರಸತ್ಯದ ನೇರ ಅನುಭವ ಮೂಡಿಸಬಲ್ಲ ಮಹಾಶಕ್ತಿ. ಉಳಿದ ಗುರುಗಳು ಕೇವಲ ಆ ಸತ್ಯದೆಡೆಗೆ ಕೈತೋರುವ ಸಾಧನಗಳಷ್ಟೇ. ಲೌಕಿಕವಾಗಿ ನಮ್ಮ ಉನ್ನತಿಯಾಗಲು ಅಗತ್ಯವಾದ ಜ್ಞಾನದಾನ ಮಾಡುವವರನ್ನು ಶಿಕ್ಷಾಗುರುಗಳೆನ್ನಬಹುದು. ಆದರೆ ಹುಟ್ಟು ಸಾವುಗಳ ಕಟ್ಟನ್ನು ಬಿಡಿಸಿ ಸತ್ಯ ಜ್ಞಾನದ ದಾನವನ್ನು ಮಾಡುವ 'ದೀಕ್ಷಾ ಗುರು'ವೇ ಪರಮಗುರು. ಒಬ್ಬ ವ್ಯಕ್ತಿಗೆ ಶಿಕ್ಷಾಗುರುಗಳು ಅನೇಕರು ಇರಬಹುದಾದರೂ ಪರಮಗುರು ಒಬ್ಬನೇ. ಆ ಒಬ್ಬ ಪರಮ ಗುರು ದೊರೆಯುವುದು ಕಷ್ಟ. **ಗುರವೋ ಬಹವಃ ಸಂತಿ ಶಿಷ್ಯ ವಿತ್ತಾಪಹಾರಕಾಃ । ಗುರವೋ ವಿರಲಾಃ ಸಂತಿ ಶಿಷ್ಯಚಿತ್ತಾಪ ಹಾರಕಾಃ ॥**—"ಶಿಷ್ಯನ ಧನವನ್ನು ಅಪಹರಿಸುವ ಗುರುಗಳು ಬಹಳ, ಆದರೆ ಶಿಷ್ಯನ ಚಿತ್ತವನ್ನು ಗೆಲ್ಲುವ ಗುರುಗಳು ವಿರಳ"— ಎನ್ನುವಂತೆ ಮೋಸಗಾರ ಗುರುವೇಷಧಾರಿಗಳಿಗೇನೂ ಕೊರತೆ

ಇಲ್ಲ. ಇಂತಹವರನ್ನು ಶಾಸ್ತ್ರ ನಿಷಿದ್ಧಗುರುಗಳೆಂದು ಕರೆದಿದೆ.

'ಮಹಾಗುರು' ಯಾರು? ಹೇಗಿರಬಹುದು? ಅವರನ್ನು ಗುರುತಿಸುವುದು ಹೇಗೆ? ವೇದವೇದಾಂಗ ಪಂಡಿತನೂ, ಕಾವ್ಯ ಶಾಸ್ತ್ರಗಳನ್ನೆಲ್ಲ ಕರತಲಾಮಲಕವಾಗಿ ಬಲ್ಲವನೂ, ನಿರ್ಗಳವಾದ ವಾಕ್ಪ್ರವಾಹದಿಂದ ಎಲ್ಲರನ್ನೂ ಬೆರಗುಗೊಳಿಸಬಲ್ಲವನೂ ಆದ ವ್ಯಕ್ತಿಯನ್ನು 'ಸದ್ಗುರು' ಎನ್ನಬಹುದೇ? ಎಂದಿಗೂ ಇಲ್ಲ. ಹಾಗಾದರೆ, ನಿರಕ್ಷರಿಯೊಬ್ಬನನ್ನು 'ಗುರು' ಎಂದು ಸ್ವೀಕರಿಸ ಬೇಕೆ? ಹಾಗೂ ಅಲ್ಲ. ಹಾಗಾದರೆ, ವಿಧವಿಧವಾದ ಸಿದ್ಧಿಗಳ ಮೂಲಕ ಕೆಲವು ವಿಶೇಷವಾದ ಶಕ್ತಿಗಳನ್ನು ಪಡೆದು, ನೀರು, ಬೆಂಕಿ, ಗಾಳಿ ಇತ್ಯಾದಿಗಳಿಂದ ಕೂಡಿದ ಪ್ರಕೃತಿಯ ಮೇಲೆ ಒಡೆತನವನ್ನು ಪ್ರದರ್ಶಿಸುವವನನ್ನು, ಅಥವಾ ದೀರ್ಘಾಯುಷ್ಯ, ನಿತ್ಯಯೌವನ, ಅಂಗಸೌಷ್ಠವ, ಸೌಂದರ್ಯ ಮೊದಲಾದುವನ್ನು ಸಾಧಿಸಿದವನನ್ನು 'ಸದ್ಗುರು' ಎನ್ನೋಣವೇ? ಸಾಧ್ಯವೇ ಇಲ್ಲ. ಹಾಗಾದರೆ ಗುರು ಎನ್ನುವನು ಪ್ರಕೃತಿಯ ಅಧೀನಕ್ಕೆ ಒಳಪಟ್ಟಿರುವವನೆ? ಹಾಗೂ ಅಲ್ಲ. ಹಾಗಾದರೆ 'ಸದ್ಗುರು' ಎಂದರೆ ಯಾರು? ವೇದವೇದಾಂಗಗಳು, ಕಾವ್ಯಶಾಸ್ತ್ರಗಳು ಯಾವ ಸತ್ಯದ ನೆಲೆಯನ್ನು ನಿರ್ದೇಶಿಸುವ ಬರಿಯ ಕೈಮರಗಳೋ ಆ ಪರಮಸತ್ಯದ ಪ್ರತ್ಯಕ್ಷ ಅನುಭವವನ್ನು ಪಡೆದು, ತಾನೇ ಆ ಸತ್ಯದ ಸಾಕಾರವಾಗಿ ನಿಂತು, ಸಂಕಲ್ಪಮಾತ್ರದಿಂದ ಇತರರಿಗೆ ಆ ಆನಂದಾನುಭವವನ್ನು ಯಾರು ಕೊಡಬಲ್ಲವನೋ ಅವನೇ 'ಸದ್ಗುರು', 'ಪರಮಗುರು', 'ಮಹಾಗುರು'.

> **ಯಾವ ಗುರುಗಳಲ್ಲಿ ಜ್ಞಾನ ಮತ್ತು ಸತ್ಯ ಸೂರ್ಯನಂತೆ ಪ್ರಕಾಶಿಸುತ್ತಿರುವುದೊ ಅವರೇ ಶ್ರೇಷ್ಠತಮರಾದ ಗುರುಗಳು.** —*ಸ್ವಾಮಿ ವಿವೇಕಾನಂದ*

ಬರಿಯ ಗ್ರಂಥಪಂಡಿತನು ಬುದ್ಧಿಯ ಮೂಲಕ ಯಾವ ಜ್ಞಾನದ ಅನುಸಂಧಾನ ಮಾಡಿರುತ್ತಾನೋ ಅದು ಅವನ ಅನುಭವದ ಆಳಕ್ಕೆ ಇಳಿದಿರುವುದಿಲ್ಲ. ಅಂತಹ ಜ್ಞಾನ ಆತ್ಮದ ಸಾರವಲ್ಲ. ಯಾರಿಗೆ ಆನಂದದ ನಿಜ ಅನುಭವವಿಲ್ಲವೋ ಅವನು ತನಗೇ ಇಲ್ಲದ ಆನಂದವನ್ನು ಇತರರಿಗೇನು ಕೊಡಬಲ್ಲ? ಇನ್ನು ಸಿದ್ಧಿಗಳೊಡನೆ ಆಡುತ್ತಿರುವ ವ್ಯಕ್ತಿ ಹೊರಪ್ರಕೃತಿಯನ್ನು ಗೆದ್ದರೂ ಒಳಪ್ರಕೃತಿಗೆ ಅವನು ಗುಲಾಮ; ಸ್ವಾರ್ಥ, ಲೋಭ, ಕೀರ್ತಿಯ ಆಸೆ, ಇಂದ್ರಿಯ ಚಪಲತೆಗಳ ಕೈಗೊಂಬೆ ಅವನು. ಇಂದು ಯಾವ ಹೊರಪ್ರಕೃತಿಯನ್ನು ತನ್ನ ವಶದಲ್ಲಿ ಇಟ್ಟುಕೊಂಡು ಆಡುತ್ತಿರುವನೋ ಅದಕ್ಕೆ ಒಂದಲ್ಲ ಒಂದು ದಿನ ಅವನು ಬಲಿಯಾಗುವುದರಲ್ಲಿ ಸಂದೇಹವೇ ಇಲ್ಲ. ಸಿದ್ಧಿಯೆಂಬ ಸಮ್ಮೋಹಿನಿಯು ಅವನನ್ನು ತನ್ನ ಬೆಡಗು ಬಿನ್ನಾಣಗಳಿಂದ ಆಕರ್ಷಿಸಿ ಅವನ ವಶವಾದಂತೆ ನಟಿಸಿ ಕೊನೆಗೆ ಅವನ ಸಾರ-ಸತ್ತ್ವವನ್ನೆಲ್ಲಾ ಹೀರಿ ಓಪ್ಪೆ ಮಾಡಿ ಬಿಸುಟುಬಿಡುವಳು. ತಾನೆ ಆಸೆಗೆ ಅಡಿಯಾಳಾದವನು ಇನ್ನೊಬ್ಬರಿಗೆ ಅದರಿಂದ ಮುಕ್ತಿ ನೀಡುವುದಾದರೂ ಹೇಗೆ? ಬ್ರಹ್ಮವಿದ್ಯೆ ಹಾವಾಡಿಗನ ಗಾರುಡಿ ವಿದ್ಯೆಯೇ?

ಹಾಗಾದರೆ ಸದ್ಗುರುವಿಗೆ ಶಾಸ್ತ್ರ ಪಾಂಡಿತ್ಯವಿಲ್ಲವೆ? ಏಕಿಲ್ಲ? ಸುಜ್ಞಾನಿಯಾದ ಗುರು ಶಾಸ್ತ್ರಗಳ ಮರ್ಮವನ್ನೆಲ್ಲ ತಿಳಿದವನು. ಅವನಿಗೆ ಪಾಂಡಿತ್ಯವೆನ್ನುವುದು ಗ್ರಂಥಗಳನ್ನು ಓದದೆಯೇ ಬರುವುದು. ಅವನು ನುಡಿದುದೇ ಶಾಸ್ತ್ರವಾಗುವುದು. ನುಡಿಯ ರಾಣಿ ಶ್ರೀಶಾರದೆಯು ತನ್ನಿಚ್ಛೆಯಿಂದ ತಾನಾಗಿ ಅವನ ನಾಲಿಗೆಯಲ್ಲಿ ಕಾವ್ಯವಾಗಿ, ಶಾಸ್ತ್ರವಾಗಿ, ಸ್ತೋತ್ರವಾಗಿ ಹರಿಯುವಳು. ಅವನ ಆನಂದದ ಅನುಭವದ ನುಡಿಗಳೇ ವೇದೋಪನಿಷತ್ತುಗಳಿಗೆ ಜೀವಂತ ಭಾಷ್ಯಗಳಾಗುವುವು. ಸದ್ಗುರುವಿಗೆ ಜ್ಞಾನ ಮತ್ತು ಅನುಷ್ಠಾನಗಳೆಂಬುದು ಪಕ್ಷಿಗೆ ಎರಡು ರೆಕ್ಕೆಗಳಿದ್ದಂತೆ. ಯಾವ ಜ್ಞಾನ ತಾನೇ ತಾನಾಗಿ ಅವನೊಳಗೆ ಬೆಳಗುತ್ತಿರುವುದೋ ಅದು ಅವನ ಪ್ರತಿ ಆಚರಣೆಯಲ್ಲೂ ಹೊರಮುಖವಾಗಿಯೂ ಬೆಳಗುವುದು. ಆದ್ದರಿಂದಲೇ ಅವನು 'ಆಚಾರ್ಯ'—ಎಂದರೆ ಅವನು ಸತ್ಯ ಪಥದಲ್ಲಿ ನಡೆಯುತ್ತಿರುವವನು; ಸತ್ಯವನ್ನು ಅನುಷ್ಠಾನ ಮಾಡುತ್ತಿರುವವನು; ಮತ್ತು ಶಿಷ್ಯರನ್ನು ಸತ್ಯದ ಅನುಷ್ಠಾನದಲ್ಲಿ ಪ್ರವರ್ತಿಸುವವನು. **ಆಚಿನೋತಿ ಹಿ ಶಾಸ್ತ್ರಾಣಿ ಸ್ವಯಮಾಚರತೇ ತಸ್ಮಾತ್ ಆಚಾರ್ಯ ಇತ್ಯುಚ್ಯತೇ**—ಎಂದರೆ ಶಾಸ್ತ್ರಗಳ ಸಾರವನ್ನೆಲ್ಲ ತನ್ನ ನಡೆನುಡಿಗಳಲ್ಲಿ ಅಳವಡಿಸಿಕೊಂಡಿರುವವನು ಎಂದರ್ಥ. ಆದ್ದರಿಂದ ಆಚಾರ್ಯನು ಪರಿಶುದ್ಧಶೀಲನಾಗಿರುವವನು.

> **ಗುರುವಿನ ಮುಖ್ಯ ಲಕ್ಷಣವೆಂದರೆ ಅವನ ಮಾತಿಗೂ ನಡತೆಗೂ ಒಂದು ಸಾಮ್ಯವಿರಬೇಕು.**
> —*ಸ್ವಾಮಿ ವಿವೇಕಾನಂದ*

ಆತ್ಮಜ್ಞಾನವನ್ನು ಜೀವಿಗಳಲ್ಲಿ ಉದ್ಬೋಧನ ಮಾಡುವುದರಿಂದಲೂ, ರಾಗದ್ವೇಷಾದಿಗಳಿಂದ ರಹಿತನಾಗಿರುವುದರಿಂದಲೂ, ಸದಾ ಧ್ಯಾನಯೋಗದಲ್ಲಿ ಮನಸ್ಸುಳ್ಳವನಾಗಿರುವುದರಿಂದಲೂ ಅವನನ್ನು ಆರಾಧ್ಯ ಎಂದು ಕರೆಯುವರು. ದೇವತೆಯ ರೂಪವನ್ನು ಧರಿಸುವುದರಿಂದಲೂ, ಶಿಷ್ಯನಿಗೆ ಮಾರ್ಗದರ್ಶನ ನೀಡಿ ಪರಮಸತ್ಯದೆಡೆಗೆ ಕೊಂಡೊಯ್ಯುವುದರಿಂದಲೂ ಕರುಣೆಯ ಸಾಕಾರ ಮೂರ್ತಿಯಾಗಿರುವುದರಿಂದಲೂ ಅವನಿಗೆ ದೇಶಿಕನೆಂದು ಹೆಸರು.

ಆದ್ದರಿಂದ ಆ ಪರಮಾತ್ಮನೇ ಪರಾತ್ಪರ ಗುರು; ಆ ಪರಾತ್ಪರ ಗುರುವಿನ ಪ್ರತ್ಯಕ್ಷಸ್ವರೂಪವೆ ಪರಮಗುರು. ಪರಮದಯೆ, ಜ್ಞಾನ, ಅನುಗ್ರಹ, ಆನಂದ ಇತ್ಯಾದಿ ಗುಣಗಳಲ್ಲಿ ಪರಮಗುರುವಿಗೂ ಪರಮಾತ್ಮನಿಗೂ ಸಾಮ್ಯವಿರುವುದಾದರೂ ಒಂದು ವಿಶೇಷ ಭೇದವಿರುವುದು. ಅದೆಂದರೆ ಪರಮಾತ್ಮನಿಗಾದರೋ ನಿಗ್ರಹಾನುಗ್ರಹ ಶಕ್ತಿ ಉಂಟು. ಅವನು ಆಶ್ರಿತರಲ್ಲಿ ದೋಷವಿದ್ದಲ್ಲಿ ನಿಗ್ರಹಿಸುವುದೂ ಉಂಟು. ಆದರೆ ಸದ್ಗುರುವಾದರೋ ಕೇವಲ ಅನುಗ್ರಹವೇ ಮೂರ್ತಿವೆತ್ತಂಥವನು; ಅಲ್ಲಿ ನಿಗ್ರಹವೇ ಇಲ್ಲ. ಪರಮಾತ್ಮನು ಕೋಪಗೊಂಡರೆ ಗುರು ಕಾಯುವನು; ಆದರೆ ಗುರು ಕೋಪಗೊಂಡರೆ ಕಾಯುವವರು ಯಾರೂ ಇಲ್ಲ. ಇಂತಹ "ಸದ್ಗುರುವಿನ ಪದಕಮಲಗಳಲ್ಲಿ ಭಕ್ತಿ ಇರಿಸಿ ಭಾರ ಒಪ್ಪಿಸಿದರೆ ತತ್ಕ್ಷಣ ಸಂಸಾರದಿಂದ ಮುಕ್ತಿ"—**ಗುರುಚರಣಾಂಬುಜ ನಿರ್ಭರ ಭಕ್ತಃ ಸಂಸಾರಾದಚಿರಾದ್ಭವ ಮುಕ್ತಃ** ಎಂದಿರುವರು ಶಂಕರ

ಭಗವತ್ಪಾದರು. ಸ್ವಾಮಿ ವಿವೇಕಾನಂದರು, **ಶಕ್ತಿಸಮುದ್ರ ಸಮುತ್ಥಿತ ರಂಗಂ, ದರ್ಶಿತಪ್ರೇಮ ವಿಜೃಂಭಿತರಂಗಂ, ಸಂಶಯರಾಕ್ಷಸ ನಾಶಮಹಾಸ್ತ್ರಂ ಯಾಮಿ ಗುರುಂ ಶರಣಂ ಭವವೈದ್ಯಮ್**— "ಶಕ್ತಿಸಮುದ್ರದಿಂದ ಮೇಲೆದ್ದ ದೊಡ್ಡ ಅಲೆಯೂ, ಪ್ರೇಮ ತೋರಿ ವಿಜೃಂಭಿಸಿದವನೂ, ಸಂಶಯವೆಂಬ ರಾಕ್ಷಸನನ್ನು ನಾಶ ಮಾಡುವ ಮಹಾಸ್ತ್ರನೂ ಭವವೈದ್ಯನೂ ಆದ ಗುರುವನ್ನು ಶರಣು ಹೋಗುತ್ತೇನೆ" ಎಂದು ಸ್ತುತಿಸಿದ್ದಾರೆ.

ಇಂತಹ ಪರಮಶಕ್ತಿಸಂಪನ್ನನಾದ, ವಿಶಿಷ್ಟಗುಣ ಸಂಪೂರ್ಣನಾದ ಸದ್ಗುರುವಿನ ವಿಶೇಷ ಶಕ್ತಿ ಹೊರಗೆ ಯಾವ ರೀತಿಯಲ್ಲಿ ವ್ಯಕ್ತವಾಗುವುದು? ಅದನ್ನು ಗುರುತಿಸುವುದು ಹೇಗೆ? ಸದ್ಗುರುವು ಸಾಮಾನ್ಯವಾಗಿ ತನ್ನ ಶಕ್ತಿಯನ್ನು ಹೊರಗೆ ಎಲ್ಲರೆದುರಿಗೂ ಪ್ರದರ್ಶನ ಮಾಡುವುದಿಲ್ಲ, ನಿಜ. ಆದರೆ ಗುರುವಿಗಾಗಿ ನಿಜವಾಗಿ ಹಂಬಲಿಸುತ್ತಿರುವ ಶಿಷ್ಯನ ಒಳಕಂಗಳಿಗೆ ಗುರುವಿನ ಮಹಿಮೆ ತಾನಾಗಿ ತಿಳಿಯುವುದು. ಗುರುವಿನ ದಯೆಯು ಸಚ್ಛಿಷ್ಯನ ಮನದಲ್ಲಿ ಸದ್ಗುರುವನ್ನು ಗುರುತಿಸುವ ಶಕ್ತಿಯನ್ನು ಉಂಟುಮಾಡುವುದು. ಶಿಷ್ಯನ ಮನಃಸ್ಥಿತಿ ಸರಿಯಾಗಿರದಿದ್ದಲ್ಲಿ ಗುರುವಿನ ಶಕ್ತಿ ಅವರಲ್ಲಿ ಕೂಡದು. ಹೇಗೆ ದೀಪವೊಂದು ಬೆಳಗಬೇಕಾದರೆ ಅದಕ್ಕೆ ಎಣ್ಣೆ ಬತ್ತಿ ಮೊದಲಾದ ಬೆಳಗಬಲ್ಲ ಧರ್ಮವುಳ್ಳ ವಸ್ತುಗಳೂ ಅವಶ್ಯವೋ, ಅಲ್ಲದೆ ನೀರು ಬಾಳೆದಿಂಡು ಇತ್ಯಾದಿಗಳಿಂದ ಸಾಧಾರಣವಾಗಿ ದೀಪ ಬೆಳಗಲು ಸಾಧ್ಯವಿಲ್ಲವೋ ಹಾಗೆಯೇ ಗುರುವೆಂಬ ಆ ಜ್ಞಾನದೀಪದಿಂದ ಜ್ಞಾನದ ಬೆಳಕನ್ನು ಪಡೆಯಬೇಕಾದರೆ ಶಿಷ್ಯನ ತ್ರಿಕರಣಗಳೂ ಆತ್ಮವೂ ಬೆಳಗಬಹುದಾದ ಎಣ್ಣೆಬತ್ತಿಗಳಂತೆ ಸಿದ್ಧವಾಗಿರಬೇಕು; ಶಿಷ್ಯನಲ್ಲಿ ಬೆಳಗುವ ಧರ್ಮ ಇರದಿದ್ದಲ್ಲಿ ಬೆಳಕು ಕಾಣಲು ಅಸಾಧ್ಯ.

ಆದ್ದರಿಂದ ಗುರುತತ್ತ್ವವೂ ಸಚ್ಛಿಷ್ಯತ್ವವೂ ಒಂದೇ ತತ್ತ್ವದ ಎರಡು ಮುಖಗಳು ಎಂದಾಯಿತು. ಸದ್ಗುರುವು ಜ್ಞಾನ ವೈರಾಗ್ಯ ಸಂಪನ್ನನೂ ಕೃಪಾಮಯನೂ ಆದರೆ ಸಚ್ಛಿಷ್ಯನಲ್ಲೂ ಆ ಗುಣಗಳು ಗುಪ್ತರೂಪದಲ್ಲಿ ಇರಬೇಕೆಂದಾಯಿತು. ಇದನ್ನೇ ತೈತ್ತಿರೀಯ ಶ್ರುತಿಯು 'ಅಧಿವಿದ್ಯ' ಎಂದು ಕರೆದು, ಅದರಲ್ಲಿ ಆಚಾರ್ಯನು ಪೂರ್ವರೂಪ, ಅಂತೇವಾಸಿಯು (ಶಿಷ್ಯ) ಉತ್ತರರೂಪ, ವಿದ್ಯೆಯೇ ಸಂಧಿ ಮತ್ತು ಪ್ರವಚನವು (ಉಪದೇಶ) ಸಂಧಾನ ಎಂದು ಸ್ತುತಿಸಿದೆ. ಆದ್ದರಿಂದ ಹೇಗೆ ಗುರುವಿಲ್ಲದೆ ಶಿಷ್ಯನಿಗೆ ಜ್ಞಾನಸಿದ್ಧಿ ಇಲ್ಲವೋ ಹಾಗೆಯೇ ಶಿಷ್ಯನಿಗೆ ಜ್ಞಾನಪ್ರದಾನ ಮಾಡದೆ ಗುರುವಿಗೆ ಗುರುತತ್ತ್ವದ ಸಿದ್ಧಿ ಇಲ್ಲ.

ಲೋಕಸೃಷ್ಟಿಯಲ್ಲಿ ಕಾಲನಿಯತಿಯ ಪ್ರಕಾರ ಅಜ್ಞಾನದ ಕತ್ತಲು ಕವಿದು ಸಮಷ್ಟಿ ಚಿಂತನವು ಸೃಷ್ಟಿಮೂಲದಲ್ಲಿರುವ ಸತ್ಯವನ್ನು ಕಾಣದೆ ಮರೆವಿನಿಂದ ತೊಳಲುವಾಗ ವಿಶ್ವಚೈತನ್ಯವಾದ ಪರಾತ್ಪರ ಗುರುತತ್ತ್ವವು ತನ್ನ ನೆಲೆಯಿಂದ ವಿಶ್ವರಂಗಕ್ಕಿಳಿದು ಸಾಕಾರವಾಗಿ, ಸಮಷ್ಟಿಯ ಆಲೋಚನಾ ಪ್ರವಾಹವನ್ನು ತಿರುಗಿಸಿ ಸತ್ಯದ ಪ್ರಕಾಶಕ್ಕೆ ಒಯ್ದು ಜೀವರ ಉದ್ಧಾರಕ್ಕೆ ಕಾರಣವಾಗುವುದು.

ಗುರುತತ್ತ್ವದ ಈ ಅವತಾರಗಳನ್ನು 'ಯುಗಪ್ರವರ್ತಕ'ರೆನ್ನುವರು. ಇಂತಹ ಅವತಾರಗಳು ಅಸಂಖ್ಯ. ಆದರೆ ಮುಖ್ಯವಾಗಿ ಗುರುತಿಸಬಹುದಾದರೆ—ಕೃತಯುಗದಲ್ಲಿ ಭಗವಂತನ ಪರಾತ್ಪರ ಗುರುಸ್ವರೂಪವು 'ಹಂಸ'ನೆಂಬ ಅವತಾರವನ್ನೂ, ಭಗವಾನ್ ಕಪಿಲಮಹರ್ಷಿಯ ಅವತಾರವನ್ನೂ ತಳೆಯಿತೆಂದು ಆಖ್ಯಾಯಿಕೆ ಇರುವುದು. ತ್ರೇತಾಯುಗದಲ್ಲಿ ಗುರುಸ್ವರೂಪದ ಅವತಾರವನ್ನು ಭಗವಾನ್ ದತ್ತಾತ್ರೇಯನೆಂದೂ, ಶ್ರೀರಾಮಚಂದ್ರನೆಂದೂ ಜ್ಞಾನಿಗಳು ಹೇಳುತ್ತಾರೆ. ದ್ವಾಪರದಲ್ಲಿ ಗುರುತತ್ತ್ವವು ಭಗವಾನ್ ವೇದವ್ಯಾಸರ ದಿವ್ಯಮೂರ್ತಿಯಲ್ಲೂ ಭಗವಾನ್ ಶ್ರೀಕೃಷ್ಣನ ದಿವ್ಯ ಮೂರ್ತಿಯಲ್ಲೂ ಯುಗಾವತಾರ ಸ್ವರೂಪವಾಗಿ ಮೂಡಿ ಬೆಳಗಿತು. ಇನ್ನು ಕಲಿಯುಗದಲ್ಲಿ ಭಗವಾನ್ ಬುದ್ಧ, ಆಚಾರ್ಯ ಶಂಕರ, ಭಗವಾನ್ ಏಸುಕ್ರಿಸ್ತ, ಮಹಾಪ್ರವಾದಿ ಶಾಂತಿದೂತ ಮಹಮ್ಮದ್—ಇವರು ಈ ಲೋಕಗುರುಗಳ ಸಾಲಿನಲ್ಲಿ ಅಗ್ರಗಣ್ಯರು.

ಇತ್ತೀಚಿನ ಕಾಲದಲ್ಲಿ ನಮ್ಮ ಮುಂದೆ ಬೆಳಗಿದ ಮಹಾ ವಿಭೂತಿಪುರುಷರೂ ಯುಗಪ್ರವರ್ತಕರೂ ಆದ ಭಗವಾನ್ ಶ್ರೀರಾಮಕೃಷ್ಣರು ಆ ಪರಾತ್ಪರ ಗುರುತತ್ತ್ವದ ಸುಂದರ ಸಾಕಾರ ಮೂರ್ತಿ. ಆ ವಿಶ್ವಚೈತನ್ಯವೇ ಅಪಾರ ಜೀವಕಾರುಣ್ಯದಿಂದ ಪರಮ ಗುರುರೂಪದಲ್ಲಿ ಒಡಮೂಡಿ, ಸಮಸ್ತ ಈಶ್ವರೀ ಗುಣಗಳಿಂದ ಬೆಳಗುತ್ತಾ, ಶ್ರೀರಾಮಕೃಷ್ಣ-ಶಾರದಾ ಎಂಬ ದಿವ್ಯ ಯುಗಳ ಮೂರ್ತಿಗಳಾಗಿ ಜಗದ್ವಂದ್ಯವಾಗಿದೆ. ಆ ಪರಮಗುರುತತ್ತ್ವದ ಇನ್ನೊಂದು ಮುಖವಾದ ಸಚ್ಛಿಷ್ಯತ್ವವೇ ಜ್ಞಾನಸಿದ್ಧಿಯ ಸಾಕಾರ ರೂಪವಾದ ಸ್ವಾಮಿ ವಿವೇಕಾನಂದರ ಶ್ರೀಮೂರ್ತಿ. ಆ ಮೂರ್ತಿ ಪರಮಗುರುವಿನ ಪರಮಕೃಪೆಯಿಂದ ಜಗದ್ಗುರುವಾಗಿ ಸರ್ವ ವಂದಿತವಾಗಿ ಚಿರಂತನವಾಗಿ ಬೆಳಗುತ್ತಿದೆ.

> **ತನ್ನ ಪೂರ್ಣತೆಯಲ್ಲಿಯೂ ಎಲ್ಲ ಆದರ್ಶಗಳನ್ನು ಸಮನ್ವಯಗೊಳಿಸುವುದರಲ್ಲಿಯೂ ಎಲ್ಲ ರೀತಿಯ ಆಧ್ಯಾತ್ಮಿಕ ಸಂಸ್ಕೃತಿಗಳಿಗೂ ಉತ್ತೇಜನ ನೀಡುವುದರಲ್ಲಿಯೂ ಈ ಅವತಾರವು (ಶ್ರೀರಾಮಕೃಷ್ಣಾವತಾರ) ಹಿಂದಿನ ಎಲ್ಲ ಅವತಾರಗಳನ್ನೂ ಖಚಿತವಾಗಿಯೂ ಮೀರಿ ನಿಂತಿದೆ.**
> —ಸ್ವಾಮಿ ವಿವೇಕಾನಂದ

ಷೋಡಶ ಶಿಷ್ಯದಳದಿಂದ ಅರಳಿದ ಆತ್ಮಕಮಲದ ಮೇಲೆ ಯೋಗಮುದ್ರೆಯಲ್ಲಿ ಕುಳಿತಿರುವ ಶ್ರೀರಾಮಕೃಷ್ಣ-ಶಾರದಾ ಯುಗಳ ಮೂರ್ತಿಯು ಗುರುತತ್ತ್ವದ ಪರಿಪೂರ್ಣರೂಪ. ಅದು ಪರಮ ಸುಂದರ, ಪರಮ ಕೃಪೆ ಮತ್ತು ಪರಮ ಆನಂದದ ಆಕರ. ಜೀವಚೈತನ್ಯ ಪ್ರವಾಹವು ಪರಮಾತ್ಮಚಂದಿರನೆಡೆಗೆ ಉಬ್ಬುಬ್ಬಿ ಹರಿಯುವ ಪರ್ವಕಾಲವಾದ 'ಗುರುಪೂರ್ಣಿಮೆ'ಯಂದು ಈ ಪರಿಪೂರ್ಣ ಸುಂದರ ಗುರುಮೂರ್ತಿಯನ್ನು, ಪರಿಪೂರ್ಣತೆಯ ಪ್ರತೀಕವಾಗಿ ಆರಾಧಿಸಿ ಆನಂದದ ಅಮೃತವರ್ಷ ಕರೆಯಲೆಂದು ಹಾರೈಸಿ, ಈ ಅಮೃತಕರ ಗುರುಚಂದ್ರಮನ ಪದಕಮಲಗಳಿಗೆ ನಮನ ಸುಮನಾಂಜಲಿ.